# Inaugural 2+2 Dialogue of the Foreign and Defence Ministers of India and the Russian Federation

November 26, 2021

---

## ಭಾರತ ಮತ್ತು ರಷ್ಯಾದ ಒಕ್ಕೂಟದ ವಿದೇಶಾಂಗ ಮತ್ತು ರಕ್ಷಣಾ ಸಚಿವರ ಉದ್ಘಾಟನಾ 2+2 ಸಂವಾದ

ನವೆಂಬರ್ 26, 2021

ವಿದೇಶ ಮತ್ತು ರಕ್ಷಣಾ ಸಚಿವರ ಮಟ್ಟದಲ್ಲಿ ಭಾರತ ಮತ್ತು ರಷ್ಯಾದ ಒಕ್ಕೂಟದ ನಡುವಿನ 2+2 ಸಂವಾದದ ಮೊದಲ ಸಭೆಯು 6 ಡಿಸೆಂಬರ್ 2021 ರಂದು ನವದೆಹಲಿಯಲ್ಲಿ ನಡೆಯಲಿದೆ. ಗೌರವಾನ್ವಿತ ರಕ್ಷಾ ಮಂತ್ರಿ ಶ್ರೀ ರಾಜನಾಥ್ ಸಿಂಗ್ ಮತ್ತು ಗೌರವಾನ್ವಿತ ವಿದೇಶಾಂಗ ಸಚಿವ ಡಾ. ಎಸ್ ಜೈಶಂಕರ್ ಸಂವಾದದಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ. ರಷ್ಯಾದ ವಿದೇಶಾಂಗ ಸಚಿವ ಎಚ್.ಇ. ಶ್ರೀ. ಸೆರ್ಗೆಯ್ ಲಾವ್ರೊವ್ ಮತ್ತು ರಷ್ಯಾದ ರಕ್ಷಣಾ ಸಚಿವ ಎಚ್.ಇ. ಶ್ರೀ. ಸೆರ್ಗೆ ಶೋಯಿಗು ಅವರು 2+2 ಸಂವಾದಕ್ಕಾಗಿ 5-6 ಡಿಸೆಂಬರ್ 2021 ರಂದು ನವದೆಹಲಿಗೆ ಭೇಟಿ ನೀಡಲಿದ್ದಾರೆ.

28 ಏಪ್ರಿಲ್ 2021 ರಂದು ತಮ್ಮ ದೂರವಾಣಿ ಸಂಭಾಷಣೆಯ ಸಮಯದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಮತ್ತು ರಷ್ಯಾದ ಅಧ್ಯಕ್ಷ ಶ್ರೀ ವ್ಲಾಡಿಮಿರ್ ಪುಟಿನ್ ನಡುವಿನ ಒಪ್ಪಂದದ ಅನುಸಾರವಾಗಿ 2+2 ಸಂವಾದವನ್ನು ನಡೆಸಲಾಗುತ್ತಿದೆ. ಸಂವಾದದ ಕಾರ್ಯಸೂಚಿಯು ಪರಸ್ಪರ ಹಿತಾಸಕ್ತಿಯ ರಾಜಕೀಯ ಮತ್ತು ರಕ್ಷಣಾ ವಿಷಯಗಳನ್ನು ಒಳಗೊಂಡಿರುತ್ತದೆ.

2+2 ಸಂವಾದದ ಹೊಸ ಕಾರ್ಯವಿಧಾನದ ಸ್ಥಾಪನೆಯು ಎರಡು ದೇಶಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ.

**ನವ ದೆಹಲಿ**
**ನವೆಂಬರ್ 26, 2021**

DISCLAIMER: This is an approximate translation. The original is available in English on MEA's website and may be referred to as the official press release.